

# ಶಬ್ದಗಳು ಕೊಡುವ ನೋವು!

**ಕಠಿಣವಾದ ಮಾತುಗಳನ್ನು ಬಳಸುವ ಚಪಲ ದೊಡ್ಡವರಲ್ಲಿದೆ. ದೊಡ್ಡವರನ್ನು ಅನುಸರಿಸುವ ಮಕ್ಕಳ ಬಾಯಲ್ಲೂ ಬೈಗುಳ ಬರುತ್ತವೆ.**

■ ಸ್ವಯಂಪ್ರಭಾ

ಮಗಳ ಮಾತುಗಳನ್ನು ಕೇಳಿ ಶಿವಾನಿ ಬೆಚ್ಚಿಬಿದ್ದಿದ್ದಳು. ಪುಟ್ಟ ಮಗಳ ಬಾಯಿಯಲ್ಲಿ ಕೆಡುಕಿನ ಮಾತುಗಳು ಸಲೀಸಾಗಿ ಹೇಗೆ ಬಂದವು ಎಂದು ಬೆಚ್ಚುತ್ತಲೇ, 'ಮುಚ್ಚು ಮುಚ್ಚು... ಬಾಯಿ ಮುಚ್ಚು' ಎನ್ನುತ್ತ ಮಗಳನ್ನು ಒಳಗೆಳೆದುಕೊಂಡು ಹೋದಳು.

ಶಿವಾನಿಗೆ ಇಬ್ಬರು ಮಕ್ಕಳು. ದೊಡ್ಡವಳು ಸನಾ, ಚಿಕ್ಕವಳು ಶ್ರೀಜಾ. ಚಿಕ್ಕವಳಿನ್ನೂ ಮಾತುಗಳನ್ನು ಸರಿಯಾಗಿ ಕಲಿಯುತ್ತ ಅಕ್ಕ ಸನಾಳನ್ನೇ ಅನುಸರಿಸುತ್ತ ಬೆಳೆಯುತ್ತಿದ್ದಳು. ಅಕ್ಕ ಹೇಳಿದ್ದನ್ನೇ ಹೇಳುವುದು, ಮಾಡಿದ್ದನ್ನೇ ಮಾಡುವುದು ಅವಳಿಗಿಷ್ಟ. ಅಕ್ಕ ಸನಾಳಿಗೆ ಶಾಲೆಯಲ್ಲಿ ಹೇಳಿಕೊಟ್ಟ ಪಾಠಕ್ಕಿಂತಲೂ ಜೊತೆಗಿರುವ ಮಕ್ಕಳು ಆಡಿದ ಆಟ, ಮಾತುಕತೆಗಳೇ ಹೆಚ್ಚು ನಾಟುತ್ತಿದ್ದವು. ಹಾಗಾಗಿ ಅಲ್ಲಿ ನಡೆದ ಕಾರುಬಾರುಗಳನ್ನೆಲ್ಲ ಮನೆಗೆ ಬಂದು ಹೇಳುತ್ತಿದ್ದಳು.

ಮೊನ್ನೆ ಸನಾ ಯಾರನ್ನೋ ಬೈದುಕೊಂಡು ಕೆಟ್ಟದಾಗಿ ಮಾತನಾಡಿದ ಮೇಲೆ, ಈಗ ಶಿವಾನಿ ಎಚ್ಚರಿಕೆಯಿಂದಿದ್ದಾಳೆ. 'ಮಗೂ ಸನಾ, ಯಾರನ್ನಾದರೂ ಅಷ್ಟೊಂದು ಬೈಯುವುದು ಸರಿಯಲ್ಲ. ಯಾವುದೋ ವಿಷಯಕ್ಕೆ ಕೋಪ ಬಂದು ಬೈಯಲೇಬೇಕು ಅನಿಸಿದರೂ, ಕೆಲವು ಪದಗಳನ್ನು ಬಳಸಲೇಬಾರದು' ಎಂದು ಬುದ್ಧಿ ಹೇಳಿದಳು. ಶಾಲೆಯಿಂದ ಬಂದ ಕೂಡಲೇ ವರದಿ ಒಪ್ಪಿಸುವಾಗ ಶ್ರೀಜಾಳ ಮುಂದೆ ಕೆಡುಕು ಮಾತನಾಡಬಾರದು ಎಂದು ಅಪ್ಪಣೆ ಮಾಡಿದಳು.

ಬುದ್ಧಿಯಾದರೂ ಅಷ್ಟೇ, ದೀರ್ಘವಾಗಿ ಹೇಳಿದರೆ ಅದು ಹಗುರಾಗಿ ಬಿಡುತ್ತದೆ. ಹಾಗಾಗಿ, ಅದು ಕೇಳ್ಮೆಯ ಪರಿಧಿಯಲ್ಲಿದ್ದಾಗಲಷ್ಟೇ ಚಂದ. ಶಿವಾನಿಗೆ ಆ ವಿಷಯ ತಿಳಿದಿತ್ತು. ಅವಳು ಬುದ್ಧಿಮಾತನ್ನೂ ಬಹಳ ಹ್ರಸ್ವವಾಗಿ ಹೇಳುತ್ತಿದ್ದಳು. ಆದರೆ ಈ ಬಾರಿ ಅವಳಿಗೆ ಬಹಳ ಆತಂಕವಾಗಿತ್ತು.

ಬೈಗುಳಗಳೇ ಹಾಗೆ. ದೊಡ್ಡವರಿರಲಿ, ಚಿಕ್ಕವರಿರಲಿ, ಅವುಗಳನ್ನು ಹೇಳುತ್ತಿರುವಾಗ ಯಾರನ್ನು ಉದ್ದೇಶಿಸಿ ಹೇಳುತ್ತೇವೋ, ಅವರಿಗಿಂತಲೂ ಕೆಟ್ಟರೀತಿಯಲ್ಲಿ ಗೋಚರಿಸುವುದು ಬೈಯುತ್ತಿರುವವರು. ಆದರೆ ಕಟು ಶಬ್ದಗಳನ್ನು ಬಳಸಿ ಬೈಯುತ್ತಿರುವವರಿಗೆ ಈ ವಿಚಾರ ಗೊತ್ತಿರುವುದಿಲ್ಲ. ಅವರೋ, ಬೈಗುಳದ ಪದಗಳು ಕಟುವಾದಷ್ಟೂ ತಮ್ಮ 'ಅಹಂ ತಣಿಯುತ್ತಿದೆ' ಎಂದು ಭಾವಿಸಿಕೊಳ್ಳುತ್ತಾರೆ. ಪದಗಳು ಕಟುವಾದಂತೆ ತಾವು ಗೆಲ್ಲುತ್ತಿದ್ದೇವೆ ಎಂದುಕೊಳ್ಳುತ್ತಾರೆ. ವಾಸ್ತವ ಹಾಗೆ ಇರುವುದಿಲ್ಲ. ಕಟುವಾದ ಪದಗಳು ವ್ಯಕ್ತಿತ್ವದ ಮೇಲಿನ ಕಪ್ಪುಚುಕ್ಕೆಗಳಿದ್ದಂತೆ. ಅವು ವ್ಯಕ್ತಿತ್ವದ ಕೆಡುಕನ್ನು ಹೇಳುತ್ತವೆ.

ಕೆಡುಕು ಮಾತನ್ನು ಬಳಸಬೇಡ ಎಂದು ಸನಾಳಿಗೆ ಎಷ್ಟೇ ಹೇಳಿದರೂ, ಅದರ ನಿಜವಾದ ಪರಿಣಾಮ ಅರಿವಾಗದೇ ಅವಳು ಅಂತಹ ಮಾತುಗಳ ಕೈಬಿಡುವುದಿಲ್ಲ ಎಂದು ಶಿವಾನಿಗೆ ಗೊತ್ತಿತ್ತು. ಅದಕ್ಕಾಗಿ ಒಂದು ಸಂದರ್ಭಕ್ಕೆ ಕಾದು, ಬೇರೆಯವರ ಉದಾಹರಣೆ ತೋರಿಸಿ ಬುದ್ಧಿ ಹೇಳಬೇಕು ಎಂದುಕೊಂಡಿದ್ದಳು. ಕಲಿತ ಪದಗಳನ್ನು ಮರಳಿ ಪಡೆಯುವುದು ಹೇಗೆ?

ಇವೆಲ್ಲ ಏನಿದ್ದರೂ ಮಕ್ಕಳ ದೃಷ್ಟಿಕೋನದಿಂದ ಯೋಚಿಸಿದಾಗ ಮನಸ್ಸಿಗೆ ಬರುವ ವಿಚಾರಗಳು. ಆದರೆ ಒಂದು ಹೆಜ್ಜೆ ಮುಂದೆ ಹೋಗಿ ಯೋಚಿಸಿದರೆ, ಮಕ್ಕಳ ವರ್ತನೆಗೆ ದೊಡ್ಡವರ ನಡತೆಯೇ ಕಾರಣವಾಗಿರುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ದಬಾಯಿಸುವಾಗ ಮನದೊಳಗೆ ಎಷ್ಟು ಕೆಟ್ಟ ಆನಂದವಾಗುತ್ತದೆ! ಹಾಗಾಗಿ ಕಟು ಮಾತುಗಳನ್ನು ಬಳಸುವ ಚಪಲವೊಂದು ದೊಡ್ಡವರಲ್ಲಿ ಇರುವುದರಿಂದಲೇ ಅದನ್ನು ಮಕ್ಕಳೂ ಬಳಸುತ್ತಾರೆ. ಯಾರೋ ಜೋರಾಗಿ ಮಾತನಾಡುವಾಗ, ಅವರು ವಿಜೃಂಭಿಸಿದಂತೆ ಭಾಸವಾಗಿ, ಅವರು ಆ ಕ್ಷಣದ ವಿಜೃಂಭಣೆಯನ್ನೇ ಪರೋಕ್ಷವಾಗಿ ಇಷ್ಟಪಟ್ಟು ಅನುಕರಣೆ ಶುರು ಮಾಡುತ್ತಾರೆ. ಆದರೆ ಆ ವಿಜೃಂಭಣೆಯು ಕೆಟ್ಟ ಪ್ರಭಾವಳಿಯಿಂದ ಕೂಡಿದ್ದು ಎಂಬುದರ ಅರಿವು ಮಕ್ಕಳಿಗಾಗುವುದಿಲ್ಲ. ಹಾಗಾಗಿ ಅವರು ಅದೇ ದಾರಿಯಲ್ಲಿ ಮುಂದುವರೆಯುತ್ತಾರೆ. ವಾಸ್ತವದ ಅರಿವಾಗುವ ವೇಳೆಗೆ ಬೈಗುಳವೊಂದು ಬಿಡಲಾಗದ ಚಟವಾಗಿಬಿಟ್ಟಿರುತ್ತದೆ.

ಅಹಂನ ತೃಪ್ತಿಗಾಗಿ ಬಳಸುವ ಕೆಡುಕು ಮಾತುಗಳು, ಬೇರೆಯವರನ್ನು ನೋಯಿಸಿದೆನೆನ್ನುವಂತೆ ಮಾತನಾಡುವ ಕಟು ಶಬ್ದಗಳಿಂದ ಬದುಕು ಹಾಳಾಗುತ್ತದೆ. ಅದು ನಮ್ಮ ಬದುಕಿನ ದೃಷ್ಟಿಕೋನದ ಮೇಲೆ ಪ್ರಭಾವ ಬೀರುತ್ತದೆ. ನಮ್ಮ ಆಪ್ತರನ್ನು ತಕ್ಕಡಿಯಲ್ಲಿಟ್ಟು ಅಳೆಯುವಂತೆ ಪ್ರೇರೇಪಿಸುತ್ತದೆ. ಅವರಲ್ಲಿರುವ ಒಳಿತಿನ ಅಂಶವನ್ನು ಮರೆಮಾಡಿಬಿಡುತ್ತದೆ.

ಕೆಡುಕಿನ ಮಾತುಗಳನ್ನು ಹೇಳಿದ ಬಳಿಕ ಅದನ್ನು ಮರಳಿ ಪಡೆಯುವುದು ಸಾಧ್ಯವಾಗುವುದಿಲ್ಲ. ಸಿಟ್ಟಿನ ಭರದಲ್ಲಿ ಹೇಳುವ ಕಟು ಶಬ್ದಗಳು ಎದುರಿಗಿರುವವರ ಮನದಲ್ಲಿ ಗಾಯವೊಂದನ್ನು ಮಾಡಿದ ಬಳಿಕ, ಅದನ್ನು ಗುಣಮಾಡಲು ಸಾಧನಗಳಿಲ್ಲ. ಹಾಗಾಗಿ ಅದು ಸಂಬಂಧಗಳಲ್ಲಿ ಬಿರುಕುಮೂಡುವಂತೆ ಮಾಡುತ್ತದೆ.

ಒಳ್ಳೆಯ ಸಮಾಜ ನಿರ್ಮಾಣಕ್ಕಾಗಿ ಮಕ್ಕಳಿಗೆ ಕೆಡುಕು ಮಾತುಗಳ ಪರಿಚಯ ಮಾಡಿಕೊಡಬಾರದು ಎಂದು ಹೇಳಬಹುದು. ಅದಕ್ಕಿಂತಲೂ ಮುಖ್ಯವಾಗಿ, ಮಕ್ಕಳ ಒಳ್ಳೆಯ ಬದುಕಿಗಾಗಿಯಾದರೂ ಅವರಿಗೆ ಮೃದುಪದಗಳ ಬೈಗುಳಗಳನ್ನಷ್ಟೇ ಕಲಿಸುವುದು ಉತ್ತಮ.

ಪ್ರತಿಕ್ರಿಯಿಸಿ: feedback@sudha.co.in